ನಮಗೆ ಇದೆಯೇ? ಅಷ್ಟೊಂದು ನೈತಿಕತೆಯನ್ನು ನಾವು ಉಳಿಸಿಕೊಂಡಿದ್ದೆವೆಯೇ? Please tell me. We are all, Iam not trying to segreate you, politicians as a class, we haveforfeited our basic right to talk about it, Doctor. That is the way we have conducted ourselves.

ಶ್ರೀ ಎಂ. ತನ್ವೀರ್ ಸೇಠ್ : ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿರುವಂಥ ಅನಧಿಕೃತ ಕಟ್ಟಡಗಳನ್ನು ನೆಲಸಮ ಮಾಡಬೇಕೇ ಎಂಬ ಪ್ರಶ್ನೆಯನ್ನು ಏನು ಹಾಕಿದ್ದಾರೆ, ಇವತ್ತು ಯಾರ ವಿಚಾರವನ್ನು ನಾವು ಮಾತನಾಡುತ್ತಿದ್ದೇವೇ ಆ ಸ್ಥಳೀಯ ಸಂಸ್ಥೆಗಳು ನಕ್ಷೆಯನ್ನು ಮಂಜೂರು ಮಾಡಿದ ಮೇಲೆ ಆ ಅಧಿಕಾರಿಗಳ ಸಮಕ್ಷಮದಲ್ಲಿ ನಕ್ಷೆಯನ್ನು marking ಮಾಡಿ ಅವರು ಕಟ್ಟಡವನ್ನು ಶುರು ಮಾಡಬೇಕು. ಅಧಿಕಾರಿಗಳು ಮಾಡಿರುವಂಥ ಲೋಪದೋಷಗಳಿಂದ ಇಂತಹ ಅನಾಹುತ ಗಳನ್ನು ನಾವು ಮಾಡುವುದಕ್ಕೆ ತಯಾರಾಗಿಲ್ಲ. ನೀವು ಮಾಡಲೇಬೇಕು ಎಂದು ಹೇಳುವುದಾದರೆ ನಾನು ಇದರಲ್ಲಿ ಭಾಗಿಯಾಗಲು ಸಾಧ್ಯವಿಲ್ಲ. ನಾನು ಸಭೇಯನ್ನು ಬಿಟ್ಟು ಹೊರಗೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಿ. ಸೋಮಣ್ಣ : ಡಾಕ್ಟರ್‌ರವರೇ, ಇದರಲ್ಲಿ parking ಮತ್ತು basement ಬಗ್ಗೆ ತಾವು ಏನು ಮಾಡಿದ್ದೀರಿ ಎಂಬುದನ್ನು ಹೇಳಲಿಲ್ಲ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, No, even for parking there is no concession.

ಶ್ರೀ ವಿ. ಸೋಮಣ್ಣ : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಾವು ಏಕೆ ನಿರ್ಧಾಕ್ಷಣ್ಯವಾಗಿ basement ಅನ್ನು car parkingಗಾಗಿ ಉಪಯೋಗ ಮಾಡಬೇಕೆಂದು ಮಾಡಬಾರದು? ಅದನ್ನು ಯಾವ ಕಾರಣಕ್ಕೂ ನಾವು unauthorised ಎಂದು consider ಮಾಡುವುದು ಬೇಡ.

ಡಾ : ವಿ.ಎಸ್. ಆಚಾರ್ಯ : ಕೆಲವು ತಪ್ಪು ಗ್ರಹಿಕೆಯಿಂದ ನಮ್ಮ ವಾದವನ್ನು ಮುಂದಿ ಡುತ್ತಿದ್ದೇವೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಸಚಿವರೇ, ಒಂದು clarification ಕೊಟ್ಟುಬಿಡಿ. ನಿಮ್ಮ ಬಿಲ್‌ಗೆ ಸಂಬಂಧಪಟ್ಟಹಾಗೆ ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ, ಈಗ 100flat ಗಳನ್ನು ಕಟ್ಟಿರುತ್ತಾರೆ, ಇದರ ಪ್ರಕಾರವಾಗಿ 50% ನೀವು rectify ಮಾಡುತ್ತೀರಿ. ನೀವು ಆ ರೀತಿ 50 flat extra

ಕಟ್ಟಿರುವುದನ್ನು ನೀವು rectify ಮಾಡಿಬಿಡುತ್ತೀರಾ? ಈ 50 flat ಗಳನ್ನು ಮಾರಾಟ ಮಾಡಿಬಿಡಬಹುದು, ಟೈಟಲ್ ಕೊಟ್ಟುಬಿಡಬಹುದು.

ಡಾ : ವಿ.ಎಸ್. ಆಚಾರ್ಯ: ಈ ರೀತಿ ಬರುವುದೇ ಇಲ್ಲ. This does not apply to that at all.

ಶ್ರೀ ನೆ.ಲ. ನರೇಂದ್ರ ಬಾಬು : ಫ್ಲಾಟ್ ಬರುವುದೇ ಇಲ್ಲವೇ?

Dr : V.S. ACHARYA : This applies to only some small concessions for set back irregularity and FAR violations. ನಾನು ಒಂದು ವಿಷಯವನ್ನು ಓದಿಬಿಡುತ್ತೇನೆ. ನಾನು ಒಂದು ತಪ್ಪು ಕೆಲಸವನ್ನು ಮಾಡಿದೆ ಎಂದು ಕಾಣುತ್ತದೆ. ನಾವು ಯಾವುದನ್ನು set right ಮಾಡುವುದಿಲ್ಲ, ಅಕ್ರಮ ಸಕ್ರಮ ಮಾಡುವುದಿಲ್ಲ ಎಂಬ ಬಗ್ಗೆ ಒಂದು ದೊಡ್ಡ list ಇದೆ. ಮೊದಲನೇಯದು ಈ Town and Country Planning Actನಲ್ಲಿ Land use, unless it goes to scrutiny of 14 ಬೇರೆ ಇಲ್ಲ. 14 ನಲ್ಲಿ ಏನು ಹೇಳುತ್ತಾರೆ, by due procedure of lawಎಂದು ಅದರ ಪ್ರಕಾರ ಮಾಡಬೇಕು.

"No such development or change in land use referred to in sub-section(1)...

(i) in the land affected by the alignments of any road or of proposed inner ring road, National High Ways, bypass road, outer ring road or mass rapid transit system....."

ತಾವು ಆ ಪ್ರಶ್ನೆಯನ್ನು ಕೇಳಿದಿರಿ. We are not going to give any concession there Because public interest is supreme.

"(ii) On the land belonging to the State Government or the Central Government..."

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, donot waste the time of this house ನಾನು ಯಾವುದನ್ನು pin point ಮಾಡಿದೆ ಎಂಬುದು ಮಾನ್ಯ ಸಭಾನಾಯಕರಿಗೆ ಆರ್ಥವಾಯಿತು. ಅವರು ಒಂದು ನಿಕಟವಾದಂಥ ಪ್ರಶ್ನೆಯನ್ನು ಕೇಳಿದರು. ಆ ಖಚಿತವಾದಂಥ ಪ್ರಶ್ನೆಗೆ ನನ್ನ ಅಭಿಪ್ರಾಯವನ್ನು ನಾನು ವ್ಯಕ್ತ ಪಡಿಸಿದ್ದೇನೆ. ನೀವು ಸರ್ಕಾರವಾಗಿ ಸಂಖ್ಯಾ ಬಲದ ದೃಷ್ಟಿಯಿಂದ ನೀವು ಇದನ್ನು ಡಾಸ್ ಮಾಡಿಕೊಂಡು ಹೋಗಲೇಬೇಕು ಎಂಬ ತೀರ್ಮಾನಕ್ಕೆ ತಾವು ಬಂದಿದ್ದರೆ, ನಮ್ಮ ಅಭಿಪ್ರಾಯವನ್ನು ನಾವು ಮಾನ್ಯ ಅಧ್ಯಕ್ಷರಿಗೆ ತಿಳಿಸಿ ಪ್ರಜಾಪ್ರಭುತ್ವದಲ್ಲಿ ನಮಗೆ ಏನು ಮಾರ್ಗವಿರುತ್ತದೆ ಅದನ್ನು ಅನುಸರಿಸಿಕೊಂಡು

ಹೋಗುತ್ತೇವೆ. ಏಕೆ ಸುಮ್ಮನೆ time waste ಮಾಡುವುದು? ನಮ್ಮ ಪಾಂಡಿತ್ಯ ಪ್ರದರ್ಶನಕ್ಕೆ ಇದು, ಇದು ಸಮಯವಲ್ಲ. ನಮ್ಮ ನಮ್ಮ ತಾತ್ವಿಕ ನಿಲುವನ್ನು ವ್ಯಕ್ತಪಡಿಸಬೇಕಾದಂಥ ನೈತಿಕ ಹೊಣೆಯನ್ನು ನಾವು ಹೊತ್ತಿದ್ದೇವೆ. ನಮ್ಮ ಅಭಿಪ್ರಾಯಗಳನ್ನು ತಮಗೆ ಹೇಳಿದ್ದೇವೆ. ನಾವು ಯಾವ ವಿಷಯದಲ್ಲಿ ಆಕ್ಷೇಪ ಎತ್ತಿದ್ದೇವೆ ಅದನ್ನು ಬಿಟ್ಟು ಉಳಿದಿದ್ದನ್ನೆಲ್ಲಾ ತಾವು ಹೇಳುತ್ತಿದ್ದೀರಿ. ನಿಮ್ಮ ಸಮಯ ಹಾಳು ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ನೀವು ನಾವು ತೀರ್ಮಾನ ಮಾಡಿಕೊಂಡೇ ಬಂದಿದ್ದೇವೆ, ಇಂಥ momentನಲ್ಲೇ ಇದು ಆಗಬೇಕು, ಇದನ್ನು ನಾವು ಪುನರ್ ವಿಮರ್ಶೆ ಮಾಡುವುದಕ್ಕೆ ನಾವು ತಯಾರಾಗಿಲ್ಲವೆಂದು ತಾವು ಹೇಳಿದರೆ ನಮ್ಮ ಪಾಡಿಗೆ ನಾವು ಹೋಗುತ್ತೇವೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೇ, ಸಧ್ಯದ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿರು ವಂಥ ವಾಸ್ತವಿಕ ಸ್ಥಿತಿಯನ್ನು ಮನಗಂಡು ನಾನು ತಮ್ಮ ಮುಖಾಂತರ ಸದನದ ಒಪ್ಪಿಗೆಯನ್ನು ಕೇಳುತ್ತಿದ್ದೇನೆ.

ಶ್ರೀ ನೆ.ಲ. ನರೇಂದ್ರ ಬಾಬು : ಈ ಅಧಿವೇಶನ ಸುಖಾಂತದಲ್ಲಿ ಮುಗಿದು, ಇಲ್ಲಿಂದ ನಿರ್ಗಮಿಸಿದರೆ ಸಂತೋಷ. ಇವತ್ತು ನಾವು ಇಲ್ಲಿಂದ ನಿರ್ಗಮಿಸಿದರೆ ಸಂತೋಷ. ಇವತ್ತು ನಾವು ಇಲ್ಲಿಂದ ಸುಖಾಂತದಲ್ಲಿ ನಿರ್ಗಮಿಸೋಣ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅತ್ಯಂತ ಸ್ಪಷ್ಟವಾಗಿ, ಸರಳವಾದಂಥ ರೀತಿಯಲ್ಲಿ ಇದರಲ್ಲಿ ಏನು ಅಪಾಯ ಅಡಗಿದೆ, ಇದರಿಂದ ನಿಮಗೇನು ಅಪಕೀರ್ತಿ ಬರುತ್ತದೆ ಎಂದು ಹೇಳಿದ್ದೇವೆ. ಒಂದು ವೇಳೆ, ಹಿಂದೆ ನಮ್ಮವರೇ ಇದಕ್ಕೆ ಕೈ ಹಾಕಿದ್ದರೂ ಕೂಡ ಅದನ್ನು ನೀವು ಮಾರ್ಗದರ್ಶನವಾಗಿ ತೆಗೆದುಕೊಳ್ಳಬೇಡಿ ಎಂದೆಲ್ಲಾ ಹೇಳಿದ್ದೇವೆ. ಆದರೆ, ಅವರ ಮನೋನಿಶ್ಚಯ ನೋಡಿದರೆ, ಪರವಾಗಿಲ್ಲ, ನಮಗೆ ಅಧಿಕಾರವೇನು ದಿವಸವೂ ಬರುವುದಿಲ್ಲ, ನಾವು ಈ ಕೆಲಸ ಮಾಡಲು ತಯಾರಿದ್ದೇವೆ, ನಿಮ್ಮ ಕೆಲಸವನ್ನು ನೀವು ಮಾಡಿಕೊಂಡು ಹೋಗಿ, ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳುತ್ತೇವೆ ಎನ್ನುವ ತೀರ್ಮಾನಕ್ಕೆ ಅವರು ಬಂದಿದ್ದರೆ, ಅವರ ಕೆಲಸವನ್ನು ಅವರು ಮುಂದುವರೆಸಿಕೊಂಡು ಹೋಗಲಿ. Collection ಚೆನ್ನಾಗಿ ಆಗಲಿ ಎಂದು ಅವರಿಗೆ ನಾವು ಶುಭವನ್ನು ಹಾರೈಸುತ್ತೇವೆ. ನಿಮ್ಮನ್ನು ಗೌರವಿಸಿ, ಈ ಶಾಸನವನ್ನು ಅಂಗೀಕಾರ ಮಾಡುವುದಕ್ಕೆ ನಾವು ಬದ್ಧರಾಗುವುದಕ್ಕೆ ತಯಾರಾಗಿಲ್ಲ ಎನ್ನುವ ನಮ್ಮ ವಿಚಾರವನ್ನು ಇಲ್ಲಿ ಮಂಡಿಸಿ, ನಮಗೆ ಪ್ರಜಾಪ್ರಭುತ್ವದಲ್ಲಿ ಇರುವ ಒಂದೇ ಮಾರ್ಗವನ್ನು ಅನುಸರಿಸಿ ನಾವು walk out ಮಾಡಿ ಹೊರಗೆ ಹೋಗುತ್ತೇವೆ.

SRI A. KRISHNAPPA : This amounts only to fraud regularization, ಅಷ್ಟೇ.

(ಈ ಹಂತದಲ್ಲಿ ಕಾಂಗ್ರೇಸ್ ಪಕ್ಷದ ಸದಸ್ಯರು ಶ್ರೀ ರಮೇಶ್ ಕುಮಾರ್ ರವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, "ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಮತ್ತು ವಿಧಾನ ಪರಿಷತ್ತಿನಿಂದ ಎರಡನೆಯ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಯೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಮತ್ತು ವಿಧಾನ ಪರಿಷತ್ತಿನಿಂದ ಎರಡನೆಯ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 4ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೇ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;